**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ161/2019 ಡಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **22.06.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ಶ್ರೀ **ಎ.ಪಿ.ಎಸ್** ವಕೀಲರಿಂದಃ

ವಾದಿ ಮತ್ತು ಪ್ರತಿವಾದಿಗಳು ಪೇಟೆಕೇರಿ ಬೀದಿಯಲ್ಲಿ ವಾಸ ಮಾಡುತ್ತಿದ್ದೇವೆ ಎಂದರೆ ಸರಿ. ಸದರಿ ರಸ್ತೆಯು ಪೂರ್ವದಿಂದ ಪಶ್ಚಿಮಕ್ಕೆ ಹಾದು ಹೋಗುತ್ತದೆ ಎಂದರೆ ಸರಿ. ಸದರಿ ರಸ್ತೆ ಪಶ್ಚಿಮ ದಿಕ್ಕಿನಲ್ಲಿರುವ ಮಾರುಕಟ್ಟೆ, ಪೂರ್ವದಲ್ಲಿ ವಾಸುವಿ ಮಂದಿರಕ್ಕೆ ಇರುವ ದಾರಿಯಾಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಸಾರ್ವಜನಿಕರು ಓಡಾಡುತ್ತಾರೆ ಎಂದರೆ ಸರಿ. 1 ಮತ್ತು 2 ನೇ ವಾದಿಯ ಮನೆ ರಸ್ತೆಯ ಉತ್ತರ ದಿಕ್ಕಿನಲ್ಲಿ ಇರುತ್ತದೆ ಎಂದರೆ ಸರಿ. 3 ನೇ ವಾದಿಯ ಮನೆ ಸದರಿ ರಸ್ತೆಯ ದಕ್ಷಿಣ ದಿಕ್ಕಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಉತ್ತರ ಹಾಗೂ ದಕ್ಷಿಣದ ದಿಕ್ಕಿನಲ್ಲಿ ವಾದಿಗಳು ಆರ್.ಆರ್.ಸಿ ಮನೆಯನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ರಸ್ತೆ ವಾಸುವಿ ಮಂದಿರದ ಹತ್ತಿರ 4 ಅಡಿ ಅಗಲ ಇರುತ್ತದೆ ಎಂದರೆ ಸರಿ. ವಾದಿಗಳ ಮನೆಯ ಮುಂಭಾಗದಲ್ಲಿ ಸದರಿ ರಸ್ತೆ 18 ಅಡಿ ಅಗಲ ಇರುತ್ತದೆ ಎಂದರೆ ಸಾಕ್ಷಿಯು 8 ಅಡಿ ಅಗಲ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯನ್ನು ನಾನೇ ಅಳತೆ ಮಾಡಿರುತ್ತೇನೆ. ಸದರಿ ರಸ್ತೆ 8 ಅಡಿ ಅಗಲ ಇರುತ್ತದೆ ಎನ್ನುವ ಬಾಬ್ತು ನಾನು ಪುರಸಭೆಯಲ್ಲಿ ದಾಖಲೆಗಳನ್ನು ನೋಡಿರುವುದಿಲ್ಲ. ಸದರಿ ರಸ್ತೆಯ ಎರಡು ಕಡೆ ಪುರಸಭೆಯವರು ಸಿಮೆಂಟ್ ಚರಂಡಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಉತ್ತರದ ಕಡೆ ಮಾತ್ರ ಸಿಮೆಂಟ ಚರಂಡಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ರಸ್ತೆ ಮಾರುಕಟ್ಟೆಯ ಸಮೀಪ 18 ಅಡಿ ಅಗಲ ಇರುತ್ತದೆ ಎಂದರೆ ಸಾಕ್ಷಿ 8 ರಿಂದ 10 ಅಡಿ ಅಗಲ ಇರುತ್ತದೆ ಎಂದು ನುಡಿಯುತ್ತಾರೆ.

1 ನೇ ವಾದಿಯ ಮನೆಯ ಪಶ್ಚಿಮ ದಿಕ್ಕಿನಲ್ಲಿ ಇರುವ ಖಾಲಿ ಜಾಗ ಹೊಟ್ಟೆ ಜವರಪ್ಪರವರಿಗೆ ಸೇರಿರುತ್ತದೆ ಎಂದರೆ ಸರಿ. ಸದರಿಯವರಿಗೆ ಸೇರಿದ ಆಸ್ತಿಯಲ್ಲಿ ನಾನು ತೆಂಗಿನ ಗರಿಯ ಗುಡಿಸಲನ್ನು ಕಟ್ಟಿಕೊಂಡಿರುತ್ತೇನೆ ಎಂದರೆ ಸರಿ.

ನನ್ನ ಅಕ್ಕನ ಹೆಸರು ಮಹದೇವಮ್ಮ ಎಂದು ಇರುತ್ತದೆ. ನನ್ನ ಅಕ್ಕ ಹೊಟ್ಟೆ ಜವರಪ್ಪರವರಿಂದ ಆಸ್ತಿಯನ್ನು ದಿ.27.09.1985 ರಲ್ಲಿ ಖರೀದಿ ಮಾಡಿದ ಬಾಬ್ತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ-1 ರಲ್ಲಿರುವ ಆರ್.ಆರ್.ಸಿ ಮನೆ 1 ನೇ ವಾದಿಗೆ ಸೇರಿರುತ್ತದೆ ಎಂದರೆ ಸರಿ. ಸದರಿ ಮನೆಗೆ ಹೊಂದಿಕೊಂಡಂತೆ ಶೀಟ್ ಹಾಕಿರುವ ಮನೆ ನನಗೆ ಸೇರಿರುತ್ತದೆ ಎಂದರೆ ಸರಿ. ನನಗೆ ಸೇರಿರುವ ಗುಡಿಸಲಿನ ಬಾಗಿಲು ಪೂರ್ವ ದಿಕ್ಕಿನಲ್ಲಿ ಇರುತ್ತದೆ ಎಂದರೆ ಸರಿ. ನನ್ನ ಗುಡಿಸಲಿನ ಮನೆಯ ಮುಂಭಾಗಿಲು ಪೂರ್ವ ದಿಕ್ಕಿನಲ್ಲಿ ಇರುತ್ತದೆ ಎಂದರೆ ಸರಿ. ನನ್ನ ಗುಡಿಸಲು ಹಾಗೂ 1 ನೇ ವಾದಿಯ ಮನೆಯ ನಡುವೆ 5 ಅಡಿ ಜಾಗ ಖಾಲಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮನೆಯ ಪೂರ್ವ ದಿಕ್ಕಿಗೆ ಹಾಗೂ ವಾದಿ ಮನೆಯ ಪಶ್ಚಿಮ ದಿಕ್ಕಿನಲ್ಲಿ ಸರ್ಕಾರದವರು ಚರಂಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ವಾದಿ ಮತ್ತು ನನ್ನ ಮನೆಯ ಗುಡಿಸಲಿನ ನಡುವೆ 5 ಅಡಿ ಗಲ್ಲಿ ಜಾಗ ಇದ್ದು, ಸದರಿ ಗಲ್ಲಿ ಜಾಗವನ್ನು ನಾನು ಒತ್ತುವರಿ ಮಾಡಿಕೊಂಡು ವಾದಿ ಮನೆಗೆ ಗಾಳಿ, ಬೆಳಕು ಬರದಂತೆ ಶೀಟನ್ನು ಹಾಕಿ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಆದಕಾರಣ 1 ನೇ ವಾದಿಯವರು ತಮ್ಮ ಮನೆಯ ಗೋಡೆಗೆ ಬಣ್ಣ ಹಚ್ಚಲು ಸಾದ್ಯವಾಗಿರುವುದಿಲ್ಲ ಎಂದರೆ ಸರಿಯಲ್ಲ. ಪುರಸಭೆಯವರು ದಾವಾ-ಎ ಆಸ್ತಿಯನ್ನು ಸಿಮೆಂಟ್ ರಸ್ತೆಯನ್ನಾಗಿ ಮಾಡಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಸಿಮೆಂಟ ರಸ್ತೆ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಸೇರಿದ ಗುಡಿಸಲು 35 ಅಡಿ ಉದ್ದ, 25 ಅಡಿ ಅಗಲ ಇರುತ್ತದೆ. ನಿಪಿ-5 ರಲ್ಲಿ ತೋರಿಸಿದಂತೆ ನನಗೆ ಸೇರಿದ ಶೌಚಾಲಯ ಸದರಿ ವಿಸ್ತೀರ್ಣದ ಆಸ್ತಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಶೌಚಾಲಯ 3 X 3.5 ಅಡಿ ಅಗಲ ಇರುತ್ತದೆ. ಸದರಿ ಶೌಚಾಲಯ ನನ್ನ ಗುಡಿಸಲಿಗೆ ಸೇರದೇ ರಸ್ತೆಯಲ್ಲಿ ಪ್ರತ್ಯೇಕವಾಗಿ ಇರುತ್ತದೆ ಎಂದರೆ ಸರಿಯಲ್ಲ. ನನಗೆ ಸೇರಿದ ಶೌಚಾಲಯವನ್ನು ಸಾರ್ವಜನಿಕರಿಗೆ ಸೇರಿದ ರಸ್ತೆಯ ಮೇಲೆ ನಿರ್ಮಾಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪುರಸಭೆಯವರು ಸಿಮೆಂಟ ರಸ್ತೆಯನ್ನು ಮಾಡುವ ಸಮಯದಲ್ಲಿ ಸದರಿ ಶೌಚಾಲಯವನ್ನು ತೆಗೆಯಬೇಕೆಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ಪುರಸಭೆಯವರು ನಿಪಿ-7 ಹಿಂಬರಹದಂತೆ ನನ್ನ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಲು ಸೂಚಿಸಿರುತ್ತಾರೆ ಎಂದರೆ ಸರಿಯಲ್ಲ. ಸಾರ್ವಜನಿಕರು ನಾನು ಶೌಚಾಲಯವನ್ನು ರಸ್ತೆಯ ಮೇಲೆ ನಿರ್ಮಾಣ ಮಾಡಿರುತ್ತೇನೆ ಎಂದು ಪುರಸಭೆಯ ಮುಖ್ಯಾಧಿಕಾರಿಗಳಿಗೆ ದೂರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಶೌಚಾಲಯವನ್ನು ರಸ್ತೆಯ ಮೇಲೆ ನಿರ್ಮಾಣ ಮಾಡಿರುವ ಕಾರಣ 2 ನೇ ವಾದಿಯು ನನ್ನ ವಿರುದ್ಧ ಪೊಲೀಸ ಠಾಣೆಯಲ್ಲಿ ದೂರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಶೌಚಾಲಯ ಕಟ್ಟಿರುವ ಜಾಗ ನನಗೆ ಸೇರಿರುತ್ತದೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಶೌಚಾಲಯ ಹಾಗೂ ಗುಡಿಸಲು ನಿರ್ಮಾಣ ಮಾಡಿರುವ ಜಾಗ ನನಗೆ ಸೇರಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಶೌಚಾಲಯವನ್ನು ಅಕ್ರಮವಾಗಿ ರಸ್ತೆಯಲ್ಲಿ ನಿರ್ಮಾಣ ಮಾಡಿರುವ ಕಾರಣ ಸಾರ್ವಜನಿಕರಿಗೆ ಹಾಗೂ ವಾದಿಗಳಿಗೆ ತೊಂದರೆ ಆಗುತ್ತಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ ತಿ.ನರಸೀಪುರ.**